**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**C.C. No.910/2023**

**CW- 10** **PW:5**

| | | |
|---|---|---|
| ಸಾಕ್ಷಿಯ ಹೆಸರು | ಃ | ಸಂತೋಷ ದಳವಾಯಿ |
| ತಂದೆ /ಗಂಡನ ಹೆಸರು | ಃ | ಚಂದ್ರಶೇಖರ |
| ವಯಸ್ಸು | ಃ | 32 ವರ್ಷ |
| ಉದ್ಯೋಗ | ಃ | ಪಿ ಎಸ್ ಐ ಬೆಳಗಾವಿ ಗ್ರಾಮಾಂತರ ಠಾಣೆ |
| ವಾಸಸ್ಥಳ | ಃ | ಬೆಳಗಾವಿ. |

ದಿಃ **17.04.2026.** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

ಫೆಬ್ರವರಿ 2023 ರಿಂದ ಜೂನ್ 2023 ರ ವರೆಗೆ ಎ ಪಿ ಎಂ ಸಿ ನವನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 28.03.2023 ರಂದು ನಾನು ಠಾಣೆಯಲ್ಲಿದ್ದಾಗ ಚಾಸಾಃ1 ರವರು ಅಕ್ರಮವಾಗಿ ಸರಾಯಿ ಮಾರಾಟ ಮಾಡುತ್ತಿದ್ದಾರೆ ಅಂತಾ ನನಗೆ ಲಿಖಿತ ದೂರನ್ನು ನೀಡಿದರು. ನಾನು ಮದ್ಯಾಹ್ನ 2.30 ಕ್ಕೆ ದೂರನ್ನು ಸ್ವೀಕರಿಸಿ ಠಾಣಾ ಗುನ್ನಾ ಸಂಖ್ಯೆ 16/203 ಅಂತಾ ಪ್ರಥಮ ವರ್ತಮಾನ ವರದಿ ದಾಖಲಿಸಿದೆ. ನನಗೆ ತೋರಿದ ನಿಪಿ.7 ರಂತೆ ದೂರನ್ನು ಸ್ವೀಕರಿಸಿದ್ದು ನನ್ನ ಸಹಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.7(ಬಿ) ಎಂದು ಗುರುತಿಸಲಾಯಿತು. ನಾನು ದಾಖಲಿಸಿದ ಪ್ರಥಮ ವರ್ತಮಾನ ವರದಿಯ ಪ್ರತಿಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.8 ಎಂದು, ನನ್ನ ಸಹಿಯನ್ನು ನಿಪಿ.8 (ಎ) ಎಂದು ಗುರುತಿಸಲಾಯಿತು. ಠಾಣೆಗೆ ಚಾಸಾಃ 7 ರವರ ಮುಖಾಂತರ ಇಬ್ಬರು ಪಂಚರಾದ ಚಾಸಾಃ 2 ಮತ್ತು 3 ರವರನ್ನು ಕರೆಸಲಾಯಿತು. ಪ್ರಕರಣದ ವಿಷಯವನ್ನು ತಿಳಿಸಿ ಪಂಚರು ಒಪ್ಪಿಕೊಂಡಿದ್ದ ಮೇರೆಗೆ ಮದ್ಯಾಹ್ನ 3.10 ಕ್ಕೆ ಠಾಣೆ ಬಿಟ್ಟೆವು. ಅಬಕಾರಿ ಕಾಯ್ದೆ ಕಲಂ 54 ರ ಅಡಿಯಲ್ಲಿ search without warrant ತಯಾರಿಸಿಕೊಂಡು ದಾಳಿಗೆ ನಾನು ಹಾಗೂ ಚಾಸಾಃ 1 ರಿಂದ 7 ಹೋದೆವು. ಸದರಿ

search without warrant ದಾಖಲೆಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.9 ಎಂದು, ನನ್ನ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಘಟನಾ ಸ್ಥಳಕ್ಕೆ ಹೋದಾಗ ಮದ್ಯಾಹ್ನ 3.25 ಆಗಿತ್ತು. ಅಮರಗೋಳ ರಾಯಲ್ ರಿಜ್ ಹೊಟೆಲ್ ಹತ್ತಿರ ಘಟನಾ ಸ್ಥಳದಿಂದ 50 ಮಿಟರ್ ದೂರದಲ್ಲಿ ವಾಚ್ ಮಾಡುತ್ತಾ ನಿಂತಿದ್ದೆವು. ನಾವು ನಿಂತಿರುವ ವೇಳೆಯಲ್ಲಿ ಅಮರಗೋಳ ರೆಲ್ವೆ ಬ್ರಿಡ್ಜ ಕೆಳಗಡೆ ಇಬ್ಬರು ವ್ಯಕ್ತಿಗಳು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ಇರುವದನ್ನು ಇಬ್ಬರು ವ್ಯಕ್ತಿಗಳಿಗೆ ಮಾರಾಟ ಮಾಡುತ್ತಿರುವುದು ಕಂಡುಬಂತು. ನಾವು ಅಲ್ಲಿಗೆ ಹೋದಾಗ ಇಬ್ಬರು ವ್ಯಕ್ತಿಗಳು ಓಡಿಹೋದರು. ಮಾರಾಟ ಮಾಡುತ್ತಿದ್ದ ವ್ಯಕ್ತಿಗಳು ಸಿಕ್ಕಿಬಿದ್ದಿದ್ದು ಆಗ ಮದ್ಯಹ್ನ 3.30 ಆಗಿತ್ತು. ಆ ಇಬ್ಬರು ವ್ಯಕ್ತಿಗಳನ್ನು ನಾನೇ ತಪಾಸಣೆ ಮಾಡಿದೆ. ಆ ಇಬ್ಬರು ವ್ಯಕ್ತಿಗಳ ಹೆಸರನ್ನು ಕೇಳಿದಾಗ ಅವರು ಬಸವರಾಜ ತಂದೆ ಅರ್ಜುನಪ್ಪ ಹಡಪದ ಹಾಗೂ ಚರಂತಯ್ಯ ತಂದೆ ಶಿವಯ್ಯ ಕಳಸನ್ನವರ ಅಂತಾ ಹೇಳಿದರು. ಅವರಿಬ್ಬರು ನ್ಯಾಯಾಲಯದ ಮುಂದೆ ಇದ್ದು ಅವರನ್ನು ನೋಡಿ ಗುರುತಿಸುತ್ತೇನೆ.

2. ಆರೋಪಿತರಿಬ್ಬರನ್ನು ತಪಾಸಿಸಿದಾಗ ಅವರ ಬಳಿ ಇದ್ದ ಬಿಳಿ ಬಣ್ಣದ ಪ್ಲಾಸಿಟಕ ಚೀಲದಲ್ಲಿ 90 ಎಮ್ ಎಲ್ ನ ಓರಿಜಿನಲ್ ಚಾಯ್ಸ ಕಂಪನಿಯ ಒಟ್ಟು 59 ಟೆಟ್ರಾ ಪ್ಯಾಕಗಳು ಇದ್ದವು. ಇವುಗಳನ್ನು ಎಲ್ಲಿಂದ ತಂದಿದ್ದರಿ ಹಾಗೂ ಮಾರಾಟ ಮಾಡಲು ಪರವಾನಿಗೆ ಇದೆಯಾ ಅಂತಾ ಕೇಳಿದಾ ಅವರು ಯಾವದೇ ಪರವಾನಿಗೆ ಇಲ್ಲ ಅಂತಾ ಹೇಳಿದರು. ಮಾರಾಟ ಮಾಡಲು ಯಾವದೇ ಪರವಾನಿಗೆ ಇರದೇ ಇರುವುದು ಅಬಕಾರಿ ಕಾಯ್ದೆ ಕಲಂ 32 ಮತ್ತು 34 ರಡಿಯಲ್ಲಿ ಅಪರಾಧ ಆಗಿದ್ದರಿಂದ ನಾವು ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಮದ್ಯಾಹ್ನ 3.30 ರಿಂದ 5 ಗಂಟೆಯವರೆಗೆ ಮಾಡಿದೆವು. ನನಗೆ ತೊರಿದ ನಿಪಿ.1 ರಂತೆ ದಾಳಿ ಪಂಚನಾಮೆಯನ್ನು ತಯಾರಿಸಿದ್ದು ನನ್ನ ಸಹಿಯನ್ನು ನಿಪಿ.1(ಡಿ) ಎಂದು ಗುರುತಿಸಲಾಯಿತು. ನಿಪಿ.4 ಕಚ್ಚಾ ನಕಾಶೆಯನ್ನು ನೋಡಿ ಗುರುತಿಸುತ್ತಿದ್ದು ನನ್ನ ಸಹಿಯನ್ನು ನಿಪಿ.4 (ಡಿ) ಎಂದು ಗುರುತಿಸಲಾಯಿತು. ನಿಪಿ.2,3 ಮತ್ತು 6 ಪೊಟೊಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ಪೊಟೊಗಳನ್ನು ಚಾಸಾಃ4 ರವರು ತೆಗೆದಿರುತ್ತಾರೆ. ಇದರ ಬಗ್ಗೆ ನಿಪಿ.5 ರಂತೆ ಕಲಂ 65(ಬಿ) ಭಾರತೀಯ ಸಾಕ್ಷ್ಯ ಅಧಿನಿಯಮ ಅಡಿಯಲ್ಲಿ ಪ್ರಮಾಣ ಪತ್ರ ಸ್ವೀಕರಿಸಿದ್ದು ನನ್ನ ಸಹಿಯನ್ನು ನಿಪಿ.5(ಬಿ)

ಎಂದು ಗುರುತಿಸಲಾಯಿತು. ಮುದ್ದೆಮಾಲನ್ನು ಮತ್ತು ಆರೋಪಿತರನ್ನು ಠಾಣೆಗೆ ಕರೆದುಕೊಂಡು ಬಂದೆ. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ನೋಡಿ ಗುರುತಿಸುತ್ತಿದ್ದು ಅದನ್ನು ಈಗಾಗಲೇ ಮು ಮಾ 1 ಎಂದು ಹಾಗೂ ಚೀಟಿಯ ಮೇಲೇ ಇರುವ ನನ್ನ ಸಹಿಯನ್ನು ಮು ಮಾ 1 (ಎ) ಎಂದು ಗುರುತಿಸಲಾಯಿತು. ಆರೋಪಿತರನ್ನು ಸೂಕ್ತ ಬೆಂಗಾವಲಿನೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿಸಿದೆ. ಚಾಸಾಃ 1 ರವರ ಪುನಃ ಹೇಳಿಕೆಯನ್ನು ಪಡೆದೆ. ಚಾಸಾಃ 4 ರಿಂದ 7 ರವರ ಹೇಳಿಕೆಯನ್ನು ಪಡೆದೆ.

3. ದಿಃ 29.03.2023 ರಂದು ಜಪ್ತಾದ ಮುದ್ದೆಮಾಲನ್ನು ಚಾಸಾಃ 8 ರವರ ಮುಖಾಂತರ ಚಾಸಾಃ 9 ರವರ ಕಚೇರಿಗೆ ಪರೀಕ್ಷೆ ಸಲುವಾಗಿ ಕಳುಹಿಸಿದೆ. ಮುದ್ದೆಮಾಲುಗಳನ್ನು ಪರೀಕ್ಷೆ ಸಲುವಾಗಿ ಕಳುಹಿಸಿದ ಬಗ್ಗೆ ಪತ್ರವನ್ನು ನೀಡಿದ್ದು ಸದರಿ ಪತ್ರವನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.10 ಎಂದು, ನನ್ನ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ದಿಃ 24.04.2023 ರಂದು ಚಾಸಾಃ 9 ರವರು ಸಲ್ಲಿಸಿದ ಪ್ರಮಾಣಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿದ್ದು ಸದರಿ ದಾಖಲೆಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.11 ಎಂದು, ನನ್ನ ಸಹಿಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು. ಸಿಬ್ಬಂದಿಗಳು ಆ ದಿವಸ ಹಾಜರಿದ್ದ ಬಗ್ಗೆ ಹಾಜರಾತಿ ನಿಜಪ್ರತಿಯನ್ನು ಕಡತಕ್ಕೆ ಅಳವಡಿಸಿದೆ. ಸದರಿ ದಾಖಲೆಯನ್ನು ನೋಡಿ ಗುರುತಿಸುತ್ತಿದ್ದು ಅದನ್ನು ನಿಪಿ.12 ಎಂದು ಗುರುತಿಸಲಾಯಿತು. ಆರೋಪಿತರ ಮೇಲೆ ಸಾಕಷ್ಟು ಸಾಕ್ಷ್ಯಾಧಾರಗಳು ಇರುವುದರಿಂದ ದಿಃ 25.04.2023 ರಂದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದೆ.

**ಆರೋಪಿತರಿಬ್ಬರು ಪಾಟಿಸವಾಲಿಗೆ ಸಮಯ ಕೋರಿದ್ದು ಯಾವದೇ ಸಕಾರಣ ಇರದೇ ಇರುವುದರಿಂದ ರೂ 1000/- ವೆಚ್ಚ ವಿಧಿಸಿ ಸಮಯ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀ ರಮೇಶ ಎಸ್ ಗಾಣಿಗೇರ)**

**3** ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.